# ಜನರ ಮೇಲೆ ಸರ್ಕಾರದ ಸಮರ

**--ಸಾವಂತ್ರಿ**

*'ಗೌರಿ ಲಂಕೇಶ್' ವಾರಪತ್ರಿಕೆ.* (ಅಕ್ಟೋಬರ್ 14-2009 ಸಂಚಿಕೆಯ ಪ್ರಕಟಿತ ಲೇಖನಗಳು)

ಇನ್ನು ಕೆಲವೇ ದಿನಗಳಲ್ಲಿ ಕಂಡುಕೇಳರಿಯದಂತಹ ಅತಿ ದೊಡ್ಡ ಆಂತರಿಕ ಯುದ್ಧ ಪ್ರಾರಂಭವಾಗಲಿದೆ. ಈ ಯುದ್ದಕ್ಕೆಂದೇ ಕಳೆದ ಒಂದು ವರ್ಷದಿಂದ ತಯಾರಿ ನಡೆಸಿರುವ ಕೇಂದ್ರ ಸರ್ಕಾರ ಈಗಾಗಲೇ 35,000 ಅರೆಸೇನಾಪಡೆಯನ್ನು ನಿಯೋಜಿಸಿದೆ. ಕಳೆದ ವಾರ ಕಾಶ್ಮೀರದಿಂದ ಹೆಚ್ಚುವರಿ 20,000 ಸೈನಿಕರನ್ನು ಕಳುಹಿಸಿದೆ. ಜೊತೆಗೆ 75 ಸಾವಿರದಿಂದ ಒಂದು ಲಕ್ಷದಷ್ಟು ಪ್ಯಾರಾ ಮಿಲಿಟರಿ ಯೋಧರೂ ಈ ಯುದ್ಧದಲ್ಲಿ ಭಾಗವಹಿಸಲಿದಾರೆ. ಅಷ್ಟೇ ಅಲ್ಲ ರಾಜ್ಯ ಸರ್ಕಾರಗಳ ಪೊಲೀಸರೂ ಕೈಜೋಡಿಸಲಿದ್ದಾರೆ.

ಬಾಂಬ್ ನಿರೋಧಕ ಟ್ರಕ್ಕುಗಳನ್ನು, ಬಾಂಬ್ ನಿರೋಧಕ ಬ್ಲಾಂಕೆಟ್‌ಗಳನ್ನು ಹಾಗೂ ಅತ್ಯಾಧುನಿಕವಾದ ಶಸ್ತ್ರಾಸ್ತ್ರಗಳನ್ನು ಖರೀದಿಸಲಾಗುತ್ತಿದೆ, ಇದೆಲ್ಲದಕ್ಕಿಂತ ಹೆಚ್ಚಾಗಿ ಜಮ್ಮು-ಕಾಶ್ಮೀರ ಮತ್ತು ಈಶಾನ್ಯ ರಾಜ್ಯಗಳಲ್ಲಿ ರಕ್ತಪಾತ ಮಾಡಿ ಭೀಭತ್ಸ ವಾತಾವರಣ ಸೃಷ್ಟಿಸಿ ಕುಖ್ಯಾತವಾಗಿರುವ ರಾಷ್ಟ್ರೀಯ ರೈಫಲ್ಸ್ ಪಡೆಯನ್ನೂ ಆಖಾಡಕ್ಕಿಳಿಸುವ ಯೋಜನೆಯೂ ಸರ್ಕಾರದ ಮುಂದಿದೆ. ಜೊತೆಗೆ ವಯುಪಡೆಯನ್ನು ನಿಯೋಜಿಸುವ ಯೋಜನೆಯೂ ಇದೆ.
ಅಕಸ್ಮಾತ್ ಈ ದೊಡ್ಡ ಪಡೆ ನಿರೀಕ್ಷಿಸಿದ ಫಲವನ್ನು ಪಡೆಯದಿದ್ದರೆ ಬಾರತದ ಸೈನ್ಯವನ್ನೇ ರಣರಂಗಕ್ಕೆ ನುಗ್ಗಿಸುವ ಯೋಜನೆಯನ್ನು ಸರ್ಕಾರ ಸಿದ್ದಮಾಡಿಟ್ಟುಕೊಂಡಿದೆ.

ಅಂದರೆ ಈ ಯುದ್ಧಕ್ಕೆಂದು ಕೇಂದ್ರ ಸರ್ಕಾರ ಸುಮಾರು ಎರಡು ಲಕ್ಷದಷ್ಟು ಸಂಖ್ಯೆಯ ಸೈನ್ಯವನ್ನು ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಯುದ್ಧ ಸಾಮಗ್ರಿಗಳನ್ನು ಸಿದ್ಧಗೊಳಿಸಿಕೊಂಡು ಭೀಕರ ಯುದ್ಧವನ್ನು ಸಾರಲು ಹೊರಟಿದೆ. ಈ ಬಲಿಷ್ಟ ಸೈನ್ಯ ಯುದ್ಧ ಸಾರಲಿರುವುದು ಯಾವುದೇ ಯಾವುದೇ ಇತರೆ ವೈರಿ ದೇಶದ ವಿರುದ್ಧವಲ್ಲ. ಬದಲಾಗಿ ಭಾರತೀಯರ ಮೇಲೆ ಯುದ್ಧ ಸಾರಲಿದೆ!

ಈ ಯುದ್ಧ ಕಾರ್ಯಾಚರಣೆಗೆ 'ಆಪರೇಷನ್ ಗ್ರೀನ್ ಹಂಟ್' ಎಂದೂ ಸೈನ್ಯ ಪಡೆಗೆ ಕೋಬ್ರಾ (ಕೋಬ್ರಾ ಬೆಟಾಲಿಯನ್ ಫಾರ್ ರೆಸೊಲ್ಯೂಟ್ ಆಕ್ಷನ್) ಎಂದೂ ನಾಮಕರಣ ಮಾಡಲಾಗಿದೆ. ಈ ಕೋಬ್ರಾಗಳು ಅಂದರೆ ಕಾಳಿಂಗ ಸರ್ಪಗಳು- ಬೇಟೆ ಆಡಲಿರುವುದು ಛತ್ತೀಸ್‌ಗಡ, ಒರಿಸ್ಸಾ, ಜಾರ್ಖಂಡ್, ರಾಜ್ಯಗಳು ಸೇರಿದಂತೆ ದೇಶದ 200 ಜಿಲ್ಲೆಗಳಲ್ಲಿ ಹರಡಿರುವ ಮಾವೋವಾದಿ (ನಕ್ಸಲ್) ಗಳನ್ನು ಅದಕ್ಕಿಂತ ಹೆಚ್ಚಾಗಿ ಆದಿವಾಸಿಗಳನ್ನು. ಈ ಯುದ್ದದ ಎರಡೂ ಕಡೆ ಇರುವವರು, ಬಂದೂಕುಗಳಿಗೆ ಬಲಿಯಾಗಲಿರುವವರು, ರಕ್ತ ಹರಿಸುವವರು, ಕಷ್ಟ-ನಷ್ಟ-ನೋವುಗಳನ್ನನುಭವಿಸುವವರು - ಎಲ್ಲರೂ ಭಾರತೀಯರೆ. ಇದನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಭಾರತ ಸರ್ಕಾರ ಭಾರತೀಯರ ಮೇಲೆಯೇ ದೊಡ್ಡ ಮಟ್ಟದ ಯುದ್ದವನ್ನು ಸಾರಲು ಸಜ್ಜಾಗಿ ನಿಂತಿದೆ.

ದೇಶದಲ್ಲಿ ಸಮಾನತೆ ಸಾಧಿಸಲು ಮಾವೋವಾದಿಗಳು ಹಿಡಿದಿರುವ ಸಶಸ್ತ್ರ ಹೋರಾಟದ ಮಾರ್ಗವನ್ನಾಗಲೀ ಅವರು ನಡೆಸಿರುವ ಹಿಂಸಾತ್ಮಕ ಕೃತ್ಯಗಳನ್ನಾಗಲೀ, ಕೊಲೆಗಳನ್ನಾಗಲೀ ಯಾರೂ ಸಮರ್ಥಿಸುವುದಿಲ್ಲ. ಆದರೆ ಈ ದೇಶದ ಸಂಪನ್ಮೂಲಗಳಿಂದ ವಂಚಿತರಾಗಿರುವ, ಅಪಾರ ದೌರ್ಜನ್ಯ ಮತ್ತು ಶೋಷಣೆಯನ್ನು ಎದುರಿಸುತ್ತಿರುವ, ಒಂದು ಹೊತ್ತಿನ ಊಟಕ್ಕೂ ಪರದಾಡುತ್ತಿರುವ ಬಡವರ

ಕುರಿತು ಮಾವೋವಾದಿಗಳು ಎತ್ತಿರುವ ಪ್ರಶ್ನೆಗಳನ್ನು ಯಾವ ಮಾನವೀಯ ಪ್ರಜ್ಞೆಯುಳ್ಳ ಮನುಷ್ಯನೂ ನಿರಾಕರಿಸಲಾಗುವುದಿಲ್ಲ. ಆದರೆ ಈ ಪ್ರಶ್ನೆಗಳಿಗೆ ಸರ್ಕಾರದ ಬಳಿ ಉತ್ತರವಿಲ್ಲ. ಮಾತ್ರವಲ್ಲ, ಮಾವೋವಾದಿಗಳು ಎತ್ತಿರುವ ಪ್ರಶ್ನೆಗಳೊಂದಿಗೆ ಅವರ ಸಶಸ್ತ್ರ ಹೋರಾಟವು ಭಾರತ ಸರ್ಕಾರಕ್ಕೆ ಅತಿ ದೊಡ್ಡ ಆಂತರಿಕ ಬೆದರಿಕೆಯಾಗಿ ಕಾಣಿಸುತ್ತಿದೆ. ಆದ್ದರಿಂದ ಬಂದೂಕಿನಿಂದ ಆ ಪ್ರಶ್ನೆಗಳನ್ನು ಹತ್ತಿಕ್ಕಲು ಹೊರಟಿದೆ. ಕಣ್ಣ ಮುಂದೆ ಕಸದ ರಾಶಿಯಿದೆ ಎಂದು ಹೇಳುವವರ ಕಣ್ಣನ್ನೆ ಕೀಳಲು ಹೊರಟಿದೆ ಸರ್ಕಾರ.

ಸರ್ಕಾರ ತನ್ನದೇ ನಾಗರೀಕರ ಮೇಲೆ ಇಂತಹದೊಂದು ಯುದ್ಧ ಸಾರುವುದಕ್ಕೆ ಸಿದ್ಧವಾಗುತ್ತಿರುವುದು ಈ ದೇಶದ ಅನೇಕ ಶಾಂತಿಪ್ರಿಯ ನಾಗರೀಕರ, ಬುದ್ದಿಜೀವಿಗಳ ನಿದ್ದೆಗೆಡಿಸಿದೆ. ಈ ಹಿಂದೆ ಪ್ರಧಾನಿ ಇಂದಿರಾಗಾಂದಿಗೆ ಆರ್ಥಿಕ ಸಲಹೆಗಾರರಾಗಿದ್ದ ಅರ್ಜುನ್ ಸೇನ್ ಗುಪ್ತ ಅವರು ಮೊನ್ನೆ – ಅಂದರೆ ಸೆಪ್ಟೆಂಬರ್ 15ರಂದು – ಪ್ರಧಾನಿ ಮನಮೋಹನ್ ಸಿಂಗ್ ಗೆ ಪತ್ರಬರೆದು ‘ ನಕ್ಸಲಿಸಂ ಎಂಬುದು ನಾವು ಕೇಳಿಸಿಕೊಳ್ಳಬೇಕಾದ ಕೂಗು’ ಎಂದು ಮನವಿ ಮಾಡಿಕೊಂಡಿದ್ದಾರೆ. “ ನಕ್ಸಲೀಯ ಚಳುವಳಿ ಎಂಬುದು ಇನ್ನಿತರ ಹಿಂಸಾತ್ಮಕ ಚಳುವಳಿಗಿಂತ ಭಿನ್ನವಾಗಿದ್ದು ಅದು ಕೇವಲ ಕಾನೂನು ಸುವ್ಯವಸ್ಥೆಯ ಸಮಸ್ಯೆಯಲ್ಲ. ಜನರು ನಿರಂತರವಾಗಿ ಅನುಭವಿಸುತ್ತಾ ಬಂದಿರುವ ಕಷ್ಟ ಕಾರ್ಪಣ್ಯಗಳು, ದಮನ ದೌರ್ಜನ್ಯಗಳು ಆ ಚಳುವಳಿಯ ಹುಟ್ಟಿಗೆ, ಉಳಿವಿಗೆ ಕಾರಣವಾಗಿದೆ. ಈ ಸಮಸ್ಯೆಯನ್ನು ಬಗೆಹರಿಸದೆ ಕೇವಲ ಮಿಲಿಟರಿ ಶಕ್ತಿಯ ಮೂಲಕ ಅದನ್ನು ದಮನ ಮಾಡಲು ಹೋದರೆ ನಮ್ಮದೇ ಅಮಾಯಕ ನಾಗರೀಕರ ರಕ್ತ ಪಾತವಾಗುತ್ತದೆ” ಎಂದು ಸರ್ಕಾರವನ್ನು ಎಚ್ಚರಿಸಿದ್ದಾರೆ.

ಆದರೆ, ಪ್ರಧಾನಿ ಮನಮೋಹನ್ ಸಿಂಗ್ ಆಗಲಿ, ಗೃಹ ಸಚಿವ ಪಿ. ಚಿದಂಬರಂ ಆಗಲಿ ಅಂತಹ ಯಾವುದೇ ಮನವಿಗೆ ಕಿವಿಗೊಡುವುದಕ್ಕೆ ಸಿದ್ಧವಿಲ್ಲ.

ನಕ್ಸಲಿಸಂ ಎಂಬುವುದು ಏನು? ಅದು ಯಾಕೆ ಹುಟ್ಟಿತು, ಯಾಕೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಬೆಳೆಯಿತು, ಕಳೆದ 35 ವರ್ಷಗಳಿಂದ ಅನೇಕ ಸರ್ಕಾರಗಳು ಅನೇಕ ದಮನಕಾರ್ಯಾಚರಣೆಗಳನ್ನು ನಡೆಸಿದ್ದರೂ ಅದನ್ನು ಯಾಕೆ ನಿರ್ನಾಮ ಮಾಡಲು ಸಾದ್ಯವಾಗಿಲ್ಲ. ಆದಿವಾಸಿ ಮತ್ತು ರೈತಸಮುದಾಅಯದ ಅಪಾರ ಜನಬೆಂಬಲವಿಲ್ಲದಿದ್ದರೆ ಅದು 35 ವರ್ಷಗಳಷ್ಟು ಸುಧೀರ್ಘಕಾಲ ಉಳಿಯಲು ಸಾಧ್ಯವಾಗುತ್ತಿತ್ತೆ–ಈ ಯಾವ ವಿಚಾರಗಳನ್ನು ಕೇಳಿಸಿಕೊಳ್ಳಲು ಅವರು ಸಿದ್ದರಿಲ್ಲ. ಅಂದರೆ, ನಕ್ಸಲಿಸಂ ಅನ್ನು ಕೇವಲ ಒಂದು ಕಾನೂನು ಸುವ್ಯವಸ್ಥೆಯ ಪ್ರಶ್ನೆಯನ್ನಾಗಿ ನೋಡುತ್ತಾ ಮಿಲಿಟರಿ ಶಕ್ತಿಯ ಮೂಲಕ ದಮನಮಾಡುವುದಕ್ಕೆ ಪ್ರಯತ್ನಿಸಲು ಹೊರಟಿದ್ದಾರೆಯೆ ಹೊರತು ಅದಕ್ಕಿರುವ ಸಾಮಾಜಿಕಾರ್ಥಿಕ ಆಯಾಮವನ್ನು ನೋಡುವುದಕ್ಕೆ ಯಾರು ಸಿದ್ದವಿಲ್ಲ.

## ಶ್ರೀಲಂಕಾ ಪ್ರೇರಣೆ

ತನ್ನ ದೇಶದ ಗಡಿಯೊಳಗೆ, ತನ್ನ ಪ್ರಜೆಗಳ ಮೇಲೆ ಇಂತಹ ದೊಡ್ಡ ಯುದ್ಧವನ್ನು ಸಾರಲು ಭಾರತ ಸರ್ಕಾರ ಪಕ್ಕದ ಶ್ರೀಲಂಕಾ ಸರ್ಕಾರದಿಂದ ಸ್ಪೂರ್ತಿ ಪಡೆದಿದೆ. ಇದೇ ವರ್ಷ, ದ್ವೀಪ ರಾಷ್ಟ್ರವಾದ ಶ್ರೀಲಂಕೆಯಲ್ಲಿ ಅದೇ ದೇಶದ ಜನಸಮುದಾಯವಾದ ತಮಿಳರ ಮೇಲೆ ಯುದ್ಧ ಸಾರಿ ‘ಜಯ’ ಗಳಿಸಿತು; ತಮಿಳರ ಸಂಘಟನೆಯಾದ ಎಲ್.ಟಿ.ಟಿ.ಇ ಯನ್ನು ನಿರ್ನಾಮ ಮಾಡಿ ಅದರ ನಾಯಕ ಪ್ರಭಾಕರನ್‌ನನ್ನು ಕೊಂದು ವಿಜಯೋತ್ಸವ ಆಚರಿಸಿತು; ಪುನರ್ವಸತಿ ಹೆಸರಿನಲ್ಲಿ ಎಲ್ಲಾ ತಮಿಳರನ್ನು ಕೊಂಪೆಗಳಂತಹ ಶಿಬಿರಗಳಿಗೆ ದೂಡಿತು. ಇವತ್ತಿಗೂ ಆ ಶಿಬಿರಗಳಲ್ಲಿ ನಡೆಯುತ್ತಿರುವ ಹಿಂಸೆ, ಸಾವು, ಕಾಣೆಯಾದವರ ಬಗ್ಗೆ ಸುದ್ಧಿಗಳು ಬರುತ್ತಲೇ ಇವೆ. ಮಾನವ ಹಕ್ಕುಗಳ ಹೋರಾಟಗಾರರು ಅವುಗಳನ್ನು ಪ್ರಶ್ನಿಸುತ್ತಿದ್ದಾರೆ.

ತಮಿಳರ ವಿರುದ್ಧ ಯುದ್ಧ ಸಾರುವ ಮುನ್ನ ಶ್ರೀಲಂಕಾ ಸರ್ಕಾರ ಎಂತೆಂತಹ ಸಿದ್ಧತೆಗಳನ್ನು ಮಾಡಿತ್ತೋ ಅವುಗಳನ್ನು ಭಾರತ ಸರ್ಕಾರ ಕೂಡ ಅನುಸರಿಸಿದೆ. ಮೊದಲನೆಯದಾಗಿ ತನ್ನ ದೇಶದೊಳಗೆ ನಡೆಯಲಿರುವ ಯುದ್ಧಕ್ಕೆ ಜಗತ್ತಿನ ದೊಡ್ಡಣ್ಣ ಅಮೇರಿಕದ ನೆರವು ಪಡೆದಿದೆ. ಇತ್ತೀಚೆಗೆ ಈ ಕಾರಣಕ್ಕಾಗಿಯೇ ಅಮೇರಿಕಕ್ಕೆ ಭೇಟಿ ನೀಡಿದ ಗೃಹಸಚಿವ ಪಿ.ಚಿದಂಬರಂ ಮಾವೋವಾದಿಗಳ ಬಂಡಾಯವನ್ನು ದಮನ ಮಾಡುವ ಬಗ್ಗೆ ಅಮೇರಿಕದ ಸಲಹೆ– ಸೂಚನೆಗಳನ್ನು ಪಡೆದು ಬಂದಿದ್ದಾರಲ್ಲದೆ, ಮಾಹಿತಿ ಸಂಗ್ರಹಣೆ ಮತ್ತು ಮಾರ್ಗದರ್ಶನ ನೀಡಲು ಅಮೇರಿಕ ಒಪ್ಪಿದೆ. ಎರಡನೆಯದಾಗಿ ಶ್ರೀಲಂಕಾದಂತೆ ಭಾರತವೂ ಮಾವೋವಾದಿಗಳ ವಿರುದ್ಧ ಪ್ರಚಾರಾಂದೋಲನವನ್ನು ಜಾರಿಗೊಳಿಸಿದೆ. ಇತ್ತೀಚೆಗೆ ಎಲ್ಲಾ ಪ್ರಮುಖ ಪತ್ರಿಕೆಗಳಲ್ಲಿ 'ನಕ್ಸಲೀಯರು ಕೊಲೆಗಡುಕರು' ಎಂದು ಸಾರುವ ಜಾಹಿರಾತುಗಳನ್ನು ಬಿಡುಗಡೆ ಮಾಡಲಾಗಿತ್ತು. ಇದರ ಜೊತೆಗೆ ಈಗಾಗಲೆ ಟಿ.ವಿ. ಚಾನಲ್‌ಗಳು ಈ ವಿಚಾರ ಕುರಿತು ಚರ್ಚೆಗಳನ್ನು ನಡೆಸುತ್ತಿವೆಯಾದರೂ ಅವುಗಳೆಲ್ಲಾ 'ನಕ್ಸಲರನ್ನು ನಿರ್ನಾಮ ಮಾಡಬೇಕು' ಎಂಬಂತಹ ನಿಲುವನ್ನೇ ಸಾದರ ಪಡಿಸುತ್ತಿವೆ. ಮೂರನೆಯದಾಗಿ ಶ್ರೀಲಂಕಾದಂತೆ ಯಾರೂ ಸರ್ಕಾರದ ಕ್ರಮವನ್ನು ಪ್ರಶ್ನಿಸದಂತೆ ಇಲ್ಲೂ ಕಾನೂನುಗಳನ್ನು, ಪೋಲಿಸ್ ರಾಜ್ಯವನ್ನು ಸೃಷ್ಠಿಸಲಾಗಿದೆ. ತಮಿಳರ ವಿರುದ್ಧದ ಶ್ರೀಲಂಕಾ ಸರ್ಕಾರದ ಕ್ರಮವನ್ನು ಪ್ರಶ್ನಿಸಿದ್ದಕ್ಕೆ ವಸಂತ ವಿಕ್ರಮತುಂಗೆಯಂಥ ಹತ್ತಾರು ಪತ್ರಕರ್ತರನ್ನು ಶ್ರೀಲಂಕಾ ಸೇನೆ ಕೊಂದುಹಾಕಿತು. ಹಾಗೆಯೇ ಇಲ್ಲಿ ದಂತೆವಾಡದಲ್ಲಿ ಛತ್ತೀಸ್‌ಗಡದ ಪೋಲೀಸರು ನಡೆಸುತ್ತಿದ್ದ ಆದಿವಾಸಿಗಳ ಮಾರಣಹೋಮವನ್ನು ಪ್ರಶ್ನಿಸಿದ್ದಕ್ಕೆ ಗಾಂಧಿವಾದಿ ಹಿಮಾಂಶು ಕುಮಾರ್ ಅವರ ಆಶ್ರಮವನ್ನೇ ಪೋಲೀಸರು ಮೊನ್ನೆ ನಾಶಗೊಳಿಸಿದ್ದಾರೆ. ಇದು ಆರಂಭ ರುಚಿ ಅಷ್ಟೇ. ನಾಲ್ಕನೆಯದಾಗಿ ಹಾಗು ಕೊನೆಯದಾಗಿ ಶ್ರೀಲಂಕಾದ ತಮಿಳರು ತಮ್ಮ ಹಕ್ಕುಗಳಿಗಾಗಿ ಹೋರಾಡಿದ್ದನ್ನೇ ದೇಶದ್ರೋಹದ ಕೆಲಸ ಎಂದು ಅಲ್ಲಿ ಬಿಂಬಿಸಿದಂತೆ ಇಲ್ಲಿಯೂ ಆದಿವಾಸಿಗಳು ತಮ್ಮ ಭೂಮಿಯನ್ನು, ತಮ್ಮ ಜೀವನ ಕ್ರಮ, ಸಂಸ್ಕೃತಿ ಆಚಾರಗಳೊಂದಿಗೆ ಬೆಸೆದುಕೊಂಡಿರುವ ಕಾಡು ಮೇಡುಗಳನ್ನು ರಕ್ಷಿಸಬೇಕೆಂದು, ಅವುಗಳನ್ನು ದೇಶಿ–ವಿದೇಶಿ ಕಂಪನಿಗಳಿಗೆ ನೀಡಬಾರದೆಂದು, ಅಲ್ಲಿ ವಾಸಿಸುವುದು ತಮ್ಮ ಹಕ್ಕೆಂದು ಹೋರಾಡುತ್ತಿರುವುದನ್ನು ದೇಶದ್ರೋಹಿ ಕೆಲಸ ಎಂದೇ ಪ್ರಚುರ ಪಡಿಸಲಾಗುತ್ತಿದೆ.

ಇದೆಲ್ಲಕ್ಕೂ ಕುಮ್ಮಕ್ಕು ಕೊಡುವಂತೆ ಹಲವಾರು ಅಧಿಕಾರಿಗಳು "ಶ್ರೀಲಂಕಾದಂತಹ ಕ್ರಮವನ್ನು ಇಲ್ಲಿಯೂ ಕೈಗೊಳ್ಳುತ್ತೇವೆ" ಎಂದು ಬೆದರಿಸಿದ್ದಾರೆ. ಅದನ್ನು ನಡೆಸುವುದು ಹೇಗೆ ಎಂದು ಸಣ್ಣ ಪ್ರಮಾಣದಲ್ಲಿ ಈಗಾಗಲೇ ಇಂತಹದ್ದೇ ಬಂಗಾಳದ ಲಾಲ್ ಗಡದ ಆದಿವಾಸಿಗಳ ಮೇಲೆ ಪ್ರಯೋಗ ನಡೆಸಲಾಗಿದೆ.ಇಂಗ್ಲೀಷ್ ನಲ್ಲಿ ಅದನ್ನು 'ಡ್ರೈ ರನ್' ಎಂದು ಕರೆಯುತ್ತಾರೆ.

## *ಸಲ್ವಾಜುಡುಂನಿಂದ ಕಲಿಯದ ಪಾಠ*

ಈ ಹಿಂದೆ ಮಾವೂವಾದಿಗಳನ್ನು ಹತ್ತಿಕ್ಕಲು ಛತ್ತೀಸ್‌ಘಡದ ಸರ್ಕಾರ ಸಲ್ವಾಜುಡುಂ ಎಂಬ ಅಭಿಯಾನ ಪ್ರಾರಂಭಿಸಿತು. ಆದಿವಾಸಿಗಳಲ್ಲೇ ಕೆಲವು ಯುವಕರುಗಳಿಗೆ ಅನೇಕ ಆಮಿಷಗಳನ್ನು ಒಡ್ಡಿ ತನ್ನೆಡೆಗೆ ಸೆಳೆದುಕೊಂಡ ಛತ್ತೀಸ್‌ಘಡದ ಪೊಲೀಸರು ಅವರ ಕೈಗಳಿಗೆ ಬಂದೂಕುಗಳನ್ನು, ಅವುಗಳನ್ನು ಬಳಸುವುದಕ್ಕೆ ತರಬೇತಿಯನ್ನು ಹಾಗೂ ತಿಂಗಳ ಲೆಕ್ಕದಲ್ಲಿ ದುಡ್ಡನ್ನು ಕೊಟ್ಟು ನಕ್ಸಲೀಯರನ್ನು ಬೆಂಬಲಿಸುವ ಆದಿವಾಸಿ ಜನರನ್ನು, ಅವರ ಮನೆಮಠಗಳನ್ನು, ಹೊಲಗದ್ದೆಗಳನ್ನು ಸರ್ವನಾಶಮಾಡಲು ಹುರಿದುಂಬಿಸಿದರು. ಪರಿಣಾಮವಾಗಿ ಪೊಲೀಸರಿಂದ ತರಬೇತಿಗೊಂಡ ಸಲ್ವಾಜುಡುಂ ಪಡೆಗಳು ಆದಿವಾಸಿ ಗಿರಿಜನರ ಹಾಡಿಗಳನ್ನು, ಅವರ ಹೊಲಗದ್ದೆಗಳನ್ನು ಧ್ವಂಸ

ಮಾಡಿ ಹಾಕಿದರಲ್ಲದೆ ನೂರಕ್ಕು ಹೆಚ್ಚು ಅಮಾಯಕ ಆದಿವಾಸಿಗಳನ್ನು ನಕ್ಸಲರ ಬೆಂಬಲಿಗರು ಎಂಬ ಹಣೆಪಟ್ಟಿ ಕಟ್ಟಿ ಕೊಂದು ಹಾಕಿದರು, ನೂರಾರು ಮಹಿಳೆಯರು ಅತ್ಯಾಚಾರಕ್ಕೊಳಗಾದರು. ಲಕ್ಷಾಂತರ ಆದಿವಾಸಿಗಳು ತಮ್ಮ ಮನೆಮಠ ಕಳೆದುಕೊಂಡು ನಿರಾಶ್ರಿತರಾದರು.

ಇದೆಲ್ಲದರಿಂದಾಗಿ ಅಳಿದುಳಿದ ಆದಿವಾಸಿಗಳೂ ಕೂಡ ತಮ್ಮ ಜೀವ ರಕ್ಷಣೆಗಾಗಿ ನಕ್ಸಲರ ದಳಗಳನ್ನು ಸೇರಿ ಅವರ ಬಲವನ್ನು ಹೆಚ್ಚಿಸಿದ್ದೂ ಆಯಿತು. ಒಂದು ಅಂದಾಜಿನ ಪ್ರಕಾರ ಸಲ್ವಾಜುಡುಂಅನ್ನು ಪ್ರಾರಂಭಿಸುವ ಮುನ್ನ ಛತ್ತೀಸ್ ಘಡದ ದಕ್ಷಿಣ ಭಾಗದಲ್ಲಿ ಕೇವಲ 500 ನಕ್ಸಲರಿದ್ದರೆ, ಈಗ ಅವರ ಸಂಖ್ಯೆ ಹತ್ತಾರು ಸಾವಿರ ಧಾಟಿದೆ. ಇನ್ನು ದೇಶದ 200 ಜಿಲ್ಲೆಗಳಲ್ಲಿ ಅವರ ಸಂಖ್ಯಾಬಲ ಎಷ್ಟಿರಬಹುದೆಂದು ಉಹಿಸಬಹುದಷ್ಟೆ. ಆದರೆ ವಾಸ್ತವವಾಗಿ ಮಾವೋವಾದಿಗಳ ಬೆಂಬಲಕ್ಕೆ ನಿಂತಿರುವವರೆಲ್ಲರಿಗೂ ಮಾವೋವಾದಿ ಸಿದ್ಧಾಂತದ ಅರಿವಿದೆ ಎಂದೇನೂ ಅಲ್ಲ. ಆದರೆ 60 ವರ್ಷಗಳ ಪ್ರಜಾಸತ್ತೆಯ ಯಾವುದೇ ಸಂಸ್ಥೆಗಳು ಅವರ ಮೂಲಭೂತ ಅವಶ್ಯಕತೆಗಳನ್ನು ಈಡೇರಿಸದೆ, ಅವರನ್ನೇ ಶತೃಗಳೆಂಬಂತೆ  ಕೊಲ್ಲುತ್ತಿರುವಾಗ ಅವರ ಕಷ್ಟನಷ್ಟಗಳಿಗೆ ಸ್ಪಂದಿಸಿದವರು ನಕ್ಸಲೀಯರು.

ಈಗ ಭಾರತ ಸರ್ಕಾರ ಸಾರಲಿರುವ ಯುದ್ದ ಪ್ರದೇಶದಲ್ಲಿ ಕನಿಷ್ಠ ಒಂದುವರೆ ಲಕ್ಷದಷ್ಟು ಅಮಾಯಕರು ವಾಸಿಸುತ್ತಿದ್ದಾರೆ. ಅವರಲ್ಲಿ ಅದೆಷ್ಟು ಜನ ಈ ಯುದ್ಧದಲ್ಲಿ ಬಲಿಯಾಗುತ್ತಾರೋ, ಹಾಗೆ ಬಲಿಯಾದವರ ಸಂಬಂಧಿಕರಲ್ಲಿ ಅದೆಷ್ಟು ಮಂದಿ ಬಂದೂಕು ಹಿಡಿದು ಸರ್ಕಾರದ ವಿರುದ್ಧ ಬಂಡಾಯವೇಳುತ್ತಾರೋ? ಬಲ್ಲವರ್ಯ್ಯಾರು?

ಇನ್ನೊಂದು ವಿಪರ್ಯಾಸವನ್ನು ಗಮನಿಸಿ : ಈ ಯುದ್ದದಲ್ಲಿ ಒಂದೆಡೆ ಬಡತನದಿಂದ ಪಾರಾಗಲು ಪೊಲೀಸ್ ಪಡೆಯನ್ನೋ ಸೈನ್ಯವನ್ನೋ ಸೇರುವ ಯುವಕರು ಇದ್ದಾರೆ. ಇನ್ನೊಂದೆಡೆ ತಮ್ಮ ಭೂಮಿಯನ್ನು ರಕ್ಷಿಸಿಕೊಳ್ಳಲು ಸಜ್ಜಾಗಿರುವ ಆದಿವಾಸಿಗಳು ಇದ್ದಾರೆ. ಅಂದರೆ ಈ ಯುದ್ದದಲ್ಲಿ ಎರಡೂ ಕಡೆ ಸಾಯಲಿರುವವರೆಲ್ಲ ಬಡತನದ ಬೇಗೆಯಲ್ಲಿ ಬೆಂದ ಅಮಾಯಕ ಭಾರತೀಯರೆ.  ಒಂದಂತೂ ಸತ್ಯ ನನ್ನ ದೇಶದ ಬಡಜನರ ಬೇಡಿಕೆಯನ್ನು ಈಡೇರಿಸಿ ಅವರನ್ನು ಪ್ರಜಾಪ್ರಭುತ್ವವ್ಯವಸ್ಥೆಯ ಪಾಲುದಾರರನ್ನಾಗಿಸಬೇಕಿದ್ದ ಸರ್ಕಾರ ಇವತ್ತು ಅವರ ವಿರುದ್ಧವೇ ಯುದ್ಧ ಸಾರಿದೆ.

ಇದು ಬರಲಿರುವ ರಕ್ತದೋಕುಳಿಯ ಮೊದಲ ಅಧ್ಯಾಯ ಮಾತ್ರ ಇದು ಅಂತ್ಯಗೊಳ್ಳುವ ಮುನ್ನ  ಇನ್ನೆಷ್ಟು ಅಧ್ಯಾಯಗಳನ್ನು ರಕ್ತಪಾತವನ್ನು ಭಾರತೀಯರು ನೋಡಬೇಕಿದೆಯೋ.

ಆದರೆ ಯಾವುದೇ ಯುದ್ಧದಲ್ಲಿ ಮೊದಲು ಸಾಯುವುದು ಸತ್ಯ. ಸತ್ಯವಂತರು. ಈ ಯುದ್ಧದಲ್ಲಿ ನ್ಯಾಯ, ನೀತಿ, ನೆಮ್ಮದಿ, ಕನಸುಗಳು ಸಾಅಯಲಿವೆ. ಅದು ಈ ದೇಶದ ಬಹುದೊಡ್ಡ ದುರಂತ.

## *ಗೃಹಮಂತ್ರಿಯ ಸೋಗಲಾಡಿತನ*

**"ಭಾರತ ದೇಶದ ಶೇ85 ರಷ್ಟು ಜನಸಂಖ್ಯೆ ನಗರಗಳಿಗೆ ವಲಸೆಹೋಗುವಂತೆ ಮಾಡುವುದೇ ನನ್ನ ಗುರಿ"**

ಎಂದಿದ್ದ ಕೇಂದ್ರ ಸಚಿವ ಪಿ.ಚಿದಂಬರಂ ತನ್ನ ಆ ದುರುದ್ದೇಶವನ್ನು ಕಾರ್ಯಗತ ಮಾಡಲೆಂದೆ 'ಆಪರೇಷನ್ ಗ್ರೀನ್ ಹಂಟ್' ಗೆ ಚಾಲನೆ ನೀಡುವುದು.

ಅಂದ ಹಾಗೆ ಈ ಚಿದಂಬರಂ ಪಕ್ಕ ತಮಿಳನಂತೆ ಬಿಳಿಯ ಪಂಚೆ ಮತ್ತು ಬಿಳಿಯ ಶರ್ಟ್ತೊಟ್ಟಿದ್ದರೂ, ಈತ ಹೃದಯಾಳದಲ್ಲಿ ಪಕ್ಕ ಬಂಡವಾಳಶಾಹಿ. ಪ್ರಖ್ಯಾತ ಹಾರ್ವರ್ಡ್

ವಿಶ್ವವಿದ್ಯಾನಿಲಯದಿಂದ ಲಾ ಡಿಗ್ರಿ ಪಡೆದ ಚಿದಂಬರಂ ತಾನು ಅಲ್ಲಿ ಕಲಿತ ವಿಧ್ಯೆಯನ್ನು ಬಂಡವಾಳ ಶಾಹಿಗಳ ಹಿತಾಸಕ್ತಿ ರಕ್ಷಿಸಲು ಮತ್ತು ತನ್ನ ಜೇಬನ್ನು ತುಂಬಿಸಿಕೊಳ್ಳುವುದಕ್ಕೆ ಬಳಸುತ್ತಾನೆ. ಉದಾ: ಹಿಂದೊಮ್ಮೆ ಭಾರತದ ಕಾರ್ಪರೇಟ್ ಇತಿಹಾಸದಲ್ಲೆ ಅತಿ ದೊಡ್ಡ ಹಗರಣವನ್ನು ಎಸಗಿದ್ದ ಕುಖ್ಯಾತ ಎನ್ರಾನ್ ಕಂಪನಿಯ ವಿರುದ್ಧ ಪ್ರಗತಿಪರರು, ಪ್ರಜ್ಞಾವಂತರು, ಭ್ರಷ್ಟಚಾರ ವಿರೋಧಿಗಳು ಪ್ರತಿಭಟಿಸುತ್ತಿದ್ದರೆ ಅವರ ವಕೀಲಿಗಿರಿ ವಹಿಸಿದ್ದ ವ್ಯಕ್ತಿ ಇದೇ ಚಿದಂಬರಂ!

ಅಷ್ಟೆ ಅಲ್ಲ ಈಗ ಒರಿಸ್ಸಾದಲ್ಲಿ ಗಣಿಗಾರಿಕೆಗೆ ಅನುಮತಿ ಪಡೆದಿರುವ ಮತ್ತೊಂದು ಕುಖ್ಯಾತ ಕಂಪನಿಯಾದ ವೇದಾಂತಂನ ಆಡಳಿತ ಮಂಡಳಿಯಲ್ಲಿ ಈ ಚಿದಂಬರಂ ಸದಸ್ಯತ್ವವನ್ನು. ಈಗ ಆ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾನಾದರೂ ಮಂಡಳಿಯ ಸದಸ್ಯನಾಗಿ ಈತ ವೇದಾಂತಂನಿಂದ ಆಗ ಪಡೆಯುತ್ತಿದ್ದ ಆದಾಯ ಕೇವಲ ಎಪ್ಪತ್ತು ಸಾವಿರ ಪೌಂಡ್‌ಗಳು ಅಂದರೆ ಸುಮಾರು 50 ಲಕ್ಷ ರೂ.ಗಳು!.

ಅಂದು ತಿಂದ ವೇದಾಂತಂನ ಉಪ್ಪಿನ ಋಣವನನ್ನು ಚಿದಂಬರಂ ಇಂದು ತೀರಿಸಲು ಹೊರಟಿರುವಂತಿದೆ. ಆ ಕಾರಣಕ್ಕೆ ಆತ ಪೊಲೀಸರನ್ನು ಅರೆ ಸೇನಾಪಡೆಗಳನ್ನು ಛೂ–ಬಿಟ್ಟು ಅರಣ್ಯ ವಾಸಿಗಳನ್ನು ಬಲವಂತವಾಗಿ ಒಕ್ಕೆಲೆಬ್ಬಿಸಲು ಸಜ್ಜಾಗಿದ್ದಾನೆ. ಆತನ ಈ ಕ್ರಮಗಳನ್ನು ವಿರೋಧಿಸುವವರು, ಪ್ರಶ್ನಿಸುವವರು ಇವತ್ತು ನಕ್ಸಲರೆಂದೋ, ನಕ್ಸಲ್ ಬೆಂಬಲಿಗರೆಂದೋ ಆರೋಪ ಹೊರಬೇಕಾಗಿದೆ.

ಅತಿ ಬಡವರಾದ ಅರಣ್ಯವಾಸಿಗಳಿಗೆ ಗೃಹಸಚಿವ ಚಿದಂಬರಂ ಆರೋಗ್ಯ ಸೌಲಭ್ಯವನ್ನಾಗಲಿ, ಶಿಕ್ಷಣ ವ್ಯವಸ್ಥೆಯನ್ನಾಗಲಿ, ಕುಡಿಯುವ ನೀರನ್ನಾಗಲಿ ಕೊಡಲಿಲ್ಲ. ಆದರೆ ತನ್ನ ಕೈಯಲ್ಲಿರುವ ಅಧಿಕಾರವನ್ನು ಉಪಯೋಗಿಸಿ ಕೊಂಡು ಈ ದೇಶ ಅತಿ ಹಿಂದುಳಿದವರು, ನತದೃಷ್ಟರಾದ ಆದಿವಾಸಿಗಳನ್ನು ಒಕ್ಕಲೆಬ್ಬಿಸಿ ಅವರ ಭೂಮಿಯನ್ನು ವೇದಾಂತಂತರಹದ ಕಂಪನಿಗಳ ಪಾದಗಳಿಗೆ ಅರ್ಪಿಸಲು ಹೊರಟಿದ್ದಾನೆ ಈ ಚಿದಂಬರಂ.

ಗೃಹಸಚಿವನೆ ಹೀಗೆ ಮಾಡುತ್ತಾನೆಂದರೆ ಇದು ಬೇಲಿಯೇ ಎದ್ದು ಹೊಲ ಮೇಯ್ದಂತಲ್ಲವೇ?

## ***ಬಡವರ ಅಹವಾಲು ಮತ್ತು ನ್ಯಾಯಮೂರ್ತಿಗಳ ಶೇರು!***

ನಮ್ಮ ದೇಶದ ಬಡವರ ಪರವಾಗಿ ಇವತ್ತು ಶಾಸಕಾಂಗ ನಿಂತಿಲ್ಲದಿರಬಹುದು, ಆಡಳಿತಾಂಗ ಕೈ ಎತ್ತಿರಬಹುದು, ಪತ್ರಿಕಾರಂಗ ಜಾಣಕುರುಡು ಪ್ರದರ್ಶಿಸುತ್ತಿರಬಹುದು, ಆದರೆ ನ್ಯಾಯಾಂಗ ಏನು ಮಾಡುತ್ತಿದೆ?

ವೇದಾಂತಂ ಗಣಿಗಾರಿಕೆ ಕಂಪನಿಯು ಒರಿಸ್ಸಾದಲ್ಲಿ ತನ್ನ ಕಾರ್ಯವನ್ನು ಪ್ರಾರಂಭಿಸಿದಾಗ ಅದರ ವಿರುಧ ಸಾರ್ವಜನಿಕ ಹಿತಾಸಕ್ತಿ ದಾವೆಗಳಲ್ಲದೇ, ಅದರಿಂದಾಗಿ ತಮ್ಮ ಪವಿತ್ರ ಭೂಮಿಯನ್ನು ಕಳೆದು ಕೊಳ್ಳಲಿರುವ ಆದಿವಾಸಿಗಳು ಸುಪ್ರೀಂ ಕೋರ್ಟ್‌ನ ಮೆಟ್ಟಿಲನ್ನೇರಿದರು. ಮಾತ್ರವಲ್ಲ, ವೇದಾಂತಂನ ಕೇಂದ್ರ ಕಛೇರಿ ಇರುವ ಲಂಡನ್‌ನಲ್ಲೂ ದೊಡ್ಡ ಪ್ರತಿಭಟನೆಗಳನ್ನು ನಡೆಸಿದರು. ಒರಿಸ್ಸಾದಲ್ಲೂ ವೇದಾಂತಂ ಎಸಗುತ್ತಿರುವ ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳನ್ನು ಅಲ್ಲಿನ ಯೂರೋಪಿನ ಮಾಧ್ಯಮಗಳಿಗೆ ಮತ್ತು ಸಾರ್ವಜನಿಕರಿಗೆ ಅರ್ಥ ಮಾಡಿಸಿದರು.
ಪರಿಣಾಮವಾಗಿ ಈ ಯೋಜನೆಯಿಂದ ನಾರ್ವೆ ಸರ್ಕಾರ ಹಿಂದೆ ಸರಿಯಿತಲ್ಲದೆ ಇಂಗ್ಲೆಂಡಿನ ಚರ್ಚ್ ಕೂಡ ಹೊರಬಂದಿತು.

ಆದರೆ ನಮ್ಮ ಸುಪ್ರೀಂ ಕೋರ್ಟ್‌ನಲ್ಲಿ ಏನಾಯಿತು?
ಆದಿವಾಸಿಗಳ ಅಹವಾಲನ್ನು ಕೇಳದ, ಮಾನವ ಹಕ್ಕುಗಳ ಉಲ್ಲಂಘನೆಯ ವಿವರಗಳನ್ನು ತಿಳಿದುಕೊಳ್ಳುವ ತಾಳ್ಮೆಯನ್ನು ತೋರದ ಸುಪ್ರೀಂ ಕೋರ್ಟ್‌ನ ವಿಭಾಗಿಯ ಪೀಠವೊಂದು

ಜನವಿರೋಧಿ ತೀರ್ಪೊಂದನ್ನು ನೀಡಿತು. ಅಷ್ಟೇಯಲ್ಲ, ಆ ಪೀಠದ ನ್ಯಾಯ ಮೂರ್ತಿಗಳಲ್ಲಿ ಒಬ್ಬರು " ಓಕೆ, ಈ ಕಾಂಟ್ರಾಕ್ಟ್‌ನ್ನು ವೇದಾಂತಂಗೆ ನೀಡುವುದು ಬೇಡ. ಬದಲಾಗಿ ಈ ಕಾಂಟ್ರಾಕ್ಟ್‌ನ್ನು ಸ್ಟರ್‌ಲೈಟ್ ಕಂಪನಿಗೆ ನೀಡೋಣ. ಯಾಕೆಂದರೆ ಸ್ಟರ್‌ಲೈಟ್ ತುಂಬ ಒಳ್ಳೆಯ ಕಂಪನಿ ಮತ್ತು ಆ ಕಂಪನಿಯ ಶೇರುಗಳನ್ನು ನಾನು ಹೊಂದಿದ್ದೇನೆ" ಎಂದು ನ್ಯಾಯಾಲಯದಲ್ಲೇ ಘೋಷಿಸಿದ್ದರು.
ಅಂದಹಾಗೆ, ಈ ಸ್ಟರ್‌ಲೈಟ್ ಕಂಪನಿ ಬೇರೆಯಾವುದೂ ಅಲ್ಲ. ಅದು ವೇದಾಂತಂ ಹತೋಟಿಯಲ್ಲಿರುವ ಸಹಭಾಗಿ ಕಂಪನಿ! ಇದು ನ್ಯಾಯಮೂರ್ತಿಗಳಿಗೆ ಗೊತ್ತಿಲ್ಲದ ವಿಷಯವಾಗಿರಲಿಲ್ಲ!!

ಜೈ ನ್ಯಾಯಾಂಗ!

## ***ಸಾಮೂಹಿಕ ಮಾರಣಹೋಮವೂ ಅಭಿವೃದ್ಧಿಯ ಮಂತ್ರವೂ***

ಇವತ್ತು ಸೂಪರ್ ಪವರ್‌ಗಳಾಗಿರುವ ದೇಶಗಳ ಇತಿಹಾಸವನ್ನು ನೋಡಿದರೆ ಅವುಗಳು ಸಾಧಿಸಿರುವ ಅಭಿವೃದ್ಧಿಗೂ ಆ ಪ್ರಕ್ರಿಯೆಯಲ್ಲಿ ದೇಶಿ ಜನಸಮುದಾಯಗಳನ್ನು ಅವು ನಾಶಮಾಡಿದ್ದಕ್ಕೂ ನೇರಾನೇರಾ ಸಂಬಂಧ ಕಂಡುಬರುತ್ತದೆ.
ಅತ್ತ ಅಮೇರಿಕಾದ ಬುಡಕಟ್ಟು ಜನಾಂಗವಾದ ರೆಡ್ ಇಂಡಿಯನ್ನರನ್ನು ಯೂರೋಪಿನ ವಲಸಿಗರು ಬಹುಸಂಖ್ಯೆಯಲ್ಲಿ ಕೊಂದು, ಅವರ ಹೆಣದಮೇಲೆ 'ಚಿನ್ನದ ಇಟ್ಟಿಗೆಗಳಿಂದ ಪಾದಚಾರಿ ರಸ್ತೆಗಳನ್ನು' ನಿರ್ಮಿಸಿದ್ದರೆ ಇತ್ತ ಆಸ್ಟ್ರೇಲಿಯಾದಲ್ಲೂ ಸ್ಥಳಿಯಾ ಅಬಂಜಿನಿ ಜನರನ್ನು ಹತ್ತಿಕ್ಕುವ ಮೂಲಕವೇ ಆ ದ್ವೀಪ ದೇಶಕ್ಕೆ ಬಂಧಿತರಾಗಿಬಂದ ಯೂರೋಪಿನ ಖೈದಿಗಳು ನೆಲೆ ಕಂಡುಕೊಂಡರು ಈ ಮದ್ಯೆ ಯೂರೋಪಿನ ದೇಶಗಳೂ ಕೂಡ ಜನಾಂಗೀಯ ದ್ವೇಶವನ್ನು ಅನುಸರಿಸಿಯೇ ಸೂಪರ್ ಪವರ್‌ಗಳಾಗಿ ನಿರ್ಮಾಣ ಗೊಂಡವು.

ಸೂಪರ್‌ಪವರ್ ದೇಶಗಳ ಈ ರಕ್ತಸಿಕ್ತ ಇತಿಹಾಸ ಭಾರತದ ಸುಶಿಕ್ಷಿತ ಮದ್ಯಮ ವರ್ಗ ಮತ್ತು ಮೇಲುವರ್ಗಗಳಿಗೆ ಗೊತ್ತಿಲ್ಲ ಎಂದೇನಲ್ಲ. ಅದೆಲ್ಲ ಅವರಿಗೆ ಚೆನ್ನಾಗಿ ಗೊತ್ತಿರುವುದರಿಂದಲೇ ಅವರೂ ಕೂಡ ಇವತ್ತು " ಅಭಿವೃದ್ಧಿಗಾಗಿ ಜನಸಮುದಾಯಗಳ ಮಾಅರಣಹೋಮ ನಡೆದರೂ ಪರವಾಗಿಲ್ಲ" ಎಂಬ ನಿಲುವನ್ನು ತಾಳಿದ್ದಾರೆ. ಹಲವಾರು ಸಮೀಕ್ಷೆಗಳ ಪ್ರಕಾರ ಭಾರತದಲ್ಲಿ ಇಂದು ಕನಿಸ್ಟ 30 ಕೋಟಿ ಮದ್ಯಮ ವರ್ಗದವರಿದ್ದಾರೆ. ಕಳೆದ ಎರಡು ವರ್ಷಗಳ ಮುಕ್ತ ಮಾರುಕಟ್ಟೆ ಎಂಬ ಆರ್ಥಿಕ ನೀತಿಯಿಂದಾಗಿ ಈ 30 ಕೋಟಿ ಮದ್ಯಮ ವರ್ಗದವರು ಅಪಾರ ಆರ್ಥಿಕ ಶಕ್ತಿ ಗಳಿಸಿದ್ದಾರೆ. ಅವರಿಗೆ ಇಂದು ಹೊಸ ಮಾಡೆಲ್ ಕಾರ್‌ಗಳು ಹೊಸ ತಂತ್ರಜ್ಞಾನ ಹೊಂದಿರುವ ಎಲಕ್ಟ್ರಾನಿಕ್ ವಸ್ತುಗಳು ಇತ್ಯಾದಿಗಳ ಅಗತ್ಯವಿದೆ. ಇಂತಹವೆಲ್ಲ ಅವರ ಕೈಗಳಿಗೆ ಸಿಗಬೇಕೆಂದರೆ ಭಾರತದಲ್ಲಿ ಹೆಚ್ಚು ಹೆಚ್ಚು ಕಂಪನಿಗಳು ತಮ್ಮ ಬಂಡವಾಳವನ್ನು ಹೂಡಬೇಕಿದೆ. ಹಾಗೆಯೇ ಇವರೆಲ್ಲರ ಕೊಳ್ಳುಬಾಕ ಪ್ರವೃತ್ತಿಯನ್ನು ಈಡೇರಿಸಲು ಹಲವಾರು ಬಹುರಾಷ್ಟ್ರೀಯ ಕಂಪನಿಗಳು ತುದಿಗಾಲ ಮೇಲೆ ನಿಂತಿವೆ. ಆದರೆ ಪಾಪ, ಈ ಮದ್ಯಮ ವರ್ಗದ ಕೊಳ್ಳುಬಾಕ ಸಂಸ್ಕೃತಿಗೂ, ಬಹುರಾಷ್ಟ್ರೀಯ ಕಂಪನಿಗಳ ದರೋಡೆಕೋರ ಪ್ರವೃತ್ತಿಗೂ ಭಾರತದ ಶೇ 70 ರಷ್ಟಿರುವ ಆದಿವಾಸಿಗಳು ಮತ್ತು ಹಿಂದುಳಿದವರು ದೋಡ್ಡ ಅಡ್ಡಿಗಳಾಗಿ ನಿಂತಿದ್ದಾರೆ. ಅಂದರೆ ಈ ದೇಶದ ಶೇ 10 ಸಂಪತ್ತನ್ನು ಹೊಂದಿರುವ ಶೇ 10 ಮದ್ಯಮ ವರ್ಗದವರ ವಿರುದ್ದ ಈ ದೇಶದ ಕೇವಲ ಶೇ10 ರಷ್ಟು ಸಂಪತ್ತನ್ನು ಪಡೆದಿರುವ ಶೇ70 ರಷ್ಟು ಜನ ನಿಂತಿದ್ದಾರೆ.

ಆ ಕಾರಣಕ್ಕಾಗಿಯೆ ಈ ಶೇ70 ರಷ್ಟು ಜನರನ್ನು ಅಂದರೆ ಭಾರತದ ಜನಸಂಖ್ಯೆಯ 75 ಕೋಟಿ ಜನರನ್ನು ಸಾಮೂಹಿಕ ಮಾರಣಹೋಮಕ್ಕೆ ದೂಡಿದರೂ ಸೈ, ತಮಗೆ " ಅಭಿವೃದ್ಧಿ" ಬೇಕೆಂದು ಇದೇ ಮದ್ಯಮ ವರ್ಗ, ಅದನ್ನು ಬೆಂಬಲಿಸುತ್ತಿರುವ ಕಾರ್ಪೊರೇಟ್ ಕಂಪನಿಗಳ ಜಾಹೀರಾತುಗಳನ್ನು ಅವಲಂಬಿಸಿರುವ ಮಾಧ್ಯಮಗಳೂ, ಅಂತಹ ಮಾದ್ಯಮಗಳ ನೆರವಿನಿಂದ ಚುನಾವಣೆಗಳಲ್ಲಿ ಗೆಲ್ಲುತ್ತಿರುವ ಜನ ಪ್ರತಿನಿದಿಗಳು ಇವತ್ತು ಚೀರಾಡುತ್ತಿದ್ದಾರೆ. ' ಆಪರೇಷನ್ ಗ್ರೀನ್ ಹಂಟ್'ಗೆ ಪರೋಕ್ಷವಾಗಿ ತಮ್ಮ ಸಮ್ಮತಿಯನ್ನು ಸೂಚಿಸುತ್ತಿದ್ದಾರೆ. ದೇಶದ ಅಭಿವೃದ್ದಿಗೆ ಅಡ್ಡಿಯಾಗುತ್ತಿರುವವರನ್ನು 'ಮುಗಿಸಿದರೆ' ಯಾವ ಸಮಸ್ಯೆನೂ ಇಲ್ಲಾ ಎಂಬ ಭಾವನೆಯನ್ನು ಪ್ರದರ್ಶಿಸುತ್ತಿದ್ದಾರೆ.

## ***ಖನಿಜ ಸಂಪತ್ತಿನ ಲೂಟಿಗಾಗಿಯೇ ಈ ರಕ್ತಪಾತ***

ರಕ್ತಪಾತ ಮಾಡಿಯಾದರೂ ಸರಿ ಮಾವೂವಾದಿಗಳನ್ನು ಹೊಸಕಿ ಹಾಕುವುದಕ್ಕೆ ಯಾಕಿಷ್ಟು ಉತ್ಸುಕರಾಗಿದ್ದಾರೆ ಎಂದು ಕೆದುಕುತ್ತಾ ಹೋದರೆ ಈ ಅಂತಿಮ ಯುದ್ಧದ ಅಸಲಿ ಕಾರಣಗಳು ಕಣ್ಣಿಗೆ ರಾಚುತ್ತವೆ. ಮಾವೋವಾದಿ ಚಳವಳಿ ಛತ್ತೀಸ್‌ಘಡ, ಜಾರ್ಖಂಡ್, ಒರಿಸ್ಸಾಗಳನ್ನೊಳಗೊಂಡ ಮದ್ಯಭಾರತದ ವಿಸ್ತಾರವಾದ ಭೂಪ್ರದೇಶದಲ್ಲಿ ಭದ್ರವಾಗಿ ನೆಲೆಯೂರಿದೆ. ಈ ವಿಶಾಲ ಭೂ ಪ್ರದೇಶದ ಇಂಚಿಂಚೂ ಅಕ್ಷರಶಃ ಖನಿಜ ಸಂಪತ್ತಿನ ಭಂಡಾರದಿಂದ ತುಂಬಿದೆ.

ಒರಿಸ್ಸಾ, ಛತ್ತೀಸ್ ಘಡ್, ಜಾರ್ಖಂಡ್ ರಾಜ್ಯಗಳಲ್ಲಿನ ಕಾಡು ಮೇಡುಗಳಲ್ಲಿ ವಾಸಿಸುತ್ತಿರುವ ಆದಿವಾಸಿಗಳು ಇವತ್ತಿನ ತನಕ ಸರ್ಕಾರವನ್ನು ಕಂಡಿಲ್ಲ ಸರ್ಕಾರ ಅಂತ ಅವರೇನಾದರೂ ನೋಡಿದ್ದರೆ ಅದು ಪೊಲೀಸರ ದೌರ್ಜನ್ಯದ ರೂಪದಲ್ಲಿ ಮಾತ್ರ. ಬಡವರಲ್ಲೇ ಅತಿ ಬಡವರಾದ ಈ ಆದಿವಾಸಿಗಳು ಇವತ್ತಿಗೂ ಪಡಿತರ ಚೀಟಿಯನ್ನು ನೋಡಿಲ್ಲ. ಸರ್ಕಾರಿ ದವಾಖಾನೆಯ ಬಾಗಿಲನ್ನು ಕಂಡಿಲ್ಲ. ಇನ್ನೂ ಶಾಲೆ, ವಸತಿ, ಕೃಷಿ ಇಲಾಖೆ ಇತ್ಯಾದಿಗಳ ಬಗ್ಗೆ ಅವರಿಗೆ ಗೊತ್ತೂ ಇಲ್ಲ. ಇವತ್ತಿಗೂ ಜಾತಿ ಧರ್ಮಗಳಿಂದ ದೂರವೇ ಉಳಿದಿರುವ ಆದಿವಾಸಿಗಳು ತಮ್ಮ ಭೂಮಿ ಮತ್ತು ಪರಿಸರವನ್ನೇ ನೆಚ್ಚಿರುವ, ಪೂಜಿಸುವ, ರಕ್ಷಿಸುವ ಪಣ ತೊಟ್ಟಿರುವ ಮುಗ್ಧರು; ಗುಡ್ಡಗಳನ್ನು, ಜಲಮೂಲಗಳನ್ನು ಪವಿತ್ರವೆಂದೇ ಭಾವಿಸಿರುವ ಪರಿಸರ ಪ್ರೇಮಿಗಳು.

ವಿಪರ್ಯಾಸ ಎಂತಹದ್ದು ನೋಡಿ. ಅವರೆಲ್ಲ ದಟ್ಟ ದಾರಿದ್ರ್ಯದಲ್ಲಿ ಜೀವಿಸುತ್ತಿದ್ದರೂ ಅವರಿರುವ ಭೂಮಿಯ ಒಡಲಲ್ಲಿ ಅಪಾರ ಸಂಪತ್ತು ಅಡಗಿದೆ. ವಿಶೇಷವಾಗಿ ಛತ್ತೀಸ್‌ಗಡ್‌ವನ್ನು ಇಡೀ ದೇಶದಲ್ಲೇ ಅತ್ಯಂತ ಹೆಚ್ಚು ಖನಿಜ ಸಂಪತ್ತನ್ನು ಹೊಂದಿದ ಸಂಪದ್ಭರಿತ ರಾಜ್ಯ ಎಂದು ಪರಿಗಣಿಸಲಾಗುತ್ತದೆ. ಇಡೀ ದೇಶದಲ್ಲಿ ದೊರೆಯುವ ಕಲ್ಲಿದ್ದಲು ಸಂಪತ್ತಿನ ಮುಕ್ಕಾಲು ಭಾಗ ಛತ್ತೀಸ್‌ಗಡ್‌ದಲ್ಲೇ ಇದೆ. ಇಡೀ ದೇಶದ ಐದನೇ ಒಂದು ಭಾಗದಷ್ಟು ಕಬ್ಬಿಣದ ಅದಿರು ಇರುವುದು ಛತ್ತೀಸ್‌ಗಡ್‌ದಲ್ಲೇ. ಇಡಿ ವಿಶ್ವದಲ್ಲೇ ಅತ್ಯುತ್ಕೃಷ್ಟ ದರ್ಜೆಯ ಕಬ್ಬಿಣದ ಅದಿರು ಸಿಗುವುದು ಛತ್ತೀಸ್‌ಗಡ್‌ದ ಬೈಲಾಡಿಲ್ಲಾದಲ್ಲೇ. ಅಲ್ಲದೇ ಬಾಕ್ಸೈಟ್, ಸುಣ್ಣದ ಕಲ್ಲು, ಡೋಲೋಮೈಟ್, ಕೋರಂಡಂ, ವಜ್ರಗಳನ್ನು ಒಳಗೊಂಡಂತೆ 28 ವಿಧದ ಅತ್ಯಮೂಲ್ಯ ಖನಿಜ ಸಂಪತ್ತಿನ ಭಂಡಾರವೇ ಇಡೀ ಛತ್ತೀಸ್ ಘಡ್‌ದಾದ್ಯಂತ ಹರಡಿಕೊಂಡಿದೆ. ಟಾಟಾ ಸ್ಟೀಲ್, ಎಸ್ಸಾರ್, ಜಿಂದಾಲ್, ಜೈಸ್ವಾಲ್‌ಗಳಂತಹ ಬೃಹತ್ ಖಾಸಗೀ ಕಂಪೆನಿಗಳು ಈ ಅಮೂಲ್ಯ ಸಂಪತ್ತನ್ನು ನಿರತರವಾಗಿ ಲೂಟಿ ಹೊಡೆಯುತ್ತಲೇ ಇವೆ. ಇತ್ತೀಚೆಗಂತೂ ಸರ್ಕಾರಗಳು ಹಲವಾರು ಸ್ವದೇಶಿ–ವಿದೇಶಿ ಕಂಪನಿಗಳಿಗೆ ಗಣಿಗಾರಿಕೆಯ ಒಡಂಬಡಿಕೆಗಳನ್ನು ಮಾಡಿಕೊಳ್ಳುತ್ತಿದೆ. ಒಂದು ಅಂದಾಜಿನ ಪ್ರಕಾರ ಒಟ್ಟು 1.50,000 ಕೋಟಿ ರೂ. ಗಣಿಗಾರಿಕೆಯ ಒಡಂಬಡಿಕೆಗಳನ್ನು ವಿವಿಧ ಖಾಸಗಿ ಕಂಪನಿಗಳೊಂದಿಗೆ ಮಾಡಿಕೊಳ್ಳಲಾಗಿದೆ.

ಆದರೆ ಸರ್ಕಾರಕ್ಕಿರುವ ಅಡೆತಡೆ ಎಂದರೆ ಒಟ್ಟಾರೆ ಈ ಪ್ರದೇಶಗಳು ಬಹುತೇಕವಾಗಿ ಆದಿವಾಸಿ ಗಿರಿಜನರು ವಾಸಿಸುವ ಪ್ರದೇಶಗಳೇ ಆಗಿದ್ದು ಆ ಗುಡ್ಡಗಾಡು ಜನರೇ ಮಾವೋವಾದಿ ಗೆರಿಲ್ಲಾ ಸೇನೆಯನ್ನು ಸೇರಿಕೊಂಡು "ಜಲ್, ಜಂಗಲ್, ಜಮೀನ್ ಹಮಾರಾ ಹೈ" ಎಂಬ ಘೋಷಣೆಯಡಿ ಗಣಿಗಾರಿಕೆ ವಿರೋಧಿ ಆಂದೋಲನ ನಡೆಸುತ್ತಿದ್ದಾರೆ. ತಾವು ವಾಸಿಸುತ್ತಿರುವ ಅರಣ್ಯ ನೆಲ, ಜಲಸಂಪತ್ತು ನಮಗೇ ಸೇರಬೇಕೆಂದೂ, ಗಣಿಗಾರಿಕೆ ನಡೆಸಿದರೆ ಅದರಿಂದ ಬರುವ ಲಾಭವನ್ನು ತಮ್ಮ ಪ್ರದೇಶದ ಅಭಿವೃದ್ಧಿಗೆ ಬಳಸಬೇಕೇ ಹೊರತು ಅದು ಯಾವುದೋ ಖಾಸಗೀ ಕಂಪನಿಯ ತಿಜೋರಿ ತುಂಬುವುದಕ್ಕೆ ಬಳಕೆಯಾಗಬಾರದೆಂದೂ ವ್ಯವಸ್ಥೆಯ ವಿರುದ್ಧ, ಪೋಲೀಸರ ವಿರುದ್ಧ ಬಂದೂಕೆತ್ತಿ ನಿಂತಿದ್ದಾರೆ. ಇಡೀ ಪ್ರದೇಶದಾದ್ಯಂತ ಆದಿವಾಸಿ ಜನಸುದಾಯ ಅಕ್ಷರಶಃ ಮಾವೋವಾದಿಗಳ ಬೆಂಬಲಕ್ಕೆ ನಿಂತಿದೆ.

ಈ ಕಾರಣದಿಂದಲೇ ಕಳೆದ 30 ವರ್ಷಗಳಿಂದ ಅನೇಕ ಸರ್ಕಾರಗಳು ಎಷ್ಟೇ ಪ್ರಯತ್ನ ಪಟ್ಟಾಗ್ಯೂ ಈ ಚಳವಳಿಯನ್ನು ಸಂಪೂರ್ಣವಾಗಿ ಹೊಸಕಿಹಾಕುವುದಕ್ಕೆ ಸಾಧ್ಯವಾಗಿರಲಿಲ್ಲ. ಹಾಗಾಗಿ ಎಲ್ಲಿಯ ತನಕ ಈ ಪ್ರದೇಶದಲ್ಲಿ ಮಾವೋವಾದಿ ಚಳವಳಿ ಅಸ್ತಿತ್ವದಲ್ಲಿರುತ್ತದೆಯೋ, ಎಲ್ಲಿಯ ತನಕ ಈ ಚಳವಳಿಗೆ ಇಡೀ ಪ್ರದೇಶದ ಆದಿವಾಸಿ ಗಿರಿಜನ ಸಮುದಾಯದ ಬೆಂಬಲವಿರುತ್ತದೆಯೋ ಅಲ್ಲಿಯ ತನಕ ಯಾವುದೇ ಸರ್ಕಾರಕ್ಕೆ ಈ ಅಪಾರ ಖನಿಜ ಸಂಪತ್ತನ್ನು ನಿರಾತಂಕವಾಗಿ, ನಿರಂತರವಾಗಿ ಲೂಟಿ ಹೊಡೆಯುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬುದು ಸರ್ಕಾರಗಳಿಗೆ ಮನವರಿಕೆಯಾಗಿ ಹೋಗಿದೆ. ಈ ಹಿನ್ನೆಲೆಯಲ್ಲೇ ಎಷ್ಟೇ ರಕ್ತಪಾತ ನಡೆಸಿಯಾದರೂ ಮಾವೋವಾದಿ ಚಳವಳಿಯನ್ನು ಸಂಪೂರ್ಣ ನಾಶಮಾಡಬೇಕು. ನಂತರ ಆದಿವಾಸಿ–ಗಿರಿಜನರನ್ನು ತಮ್ಮ ತಮ್ಮ ನೆಲೆಗಳಿಂದ ಒಕ್ಕಲೆಬ್ಬಿಸಿ ಕಾಡಿನಿಂದ ಹೊರದಬ್ಬಬೇಕು ಆಮೇಲೆ ಆ ಇಡೀ ಪ್ರದೇಶವನ್ನು ಖಾಸಗೀ ಕಂಪನಿಗಳಿಗೆ ಗಣಿಗಾರಿಕೆ ನಡೆಸುವುದಕ್ಕೆ ಒಪ್ಪಿಸಬೇಕು ಎಂಬ ನಿರ್ಧಾಕ್ಕೆ ಕೇಂದ್ರ ಸರ್ಕಾರ ಬಂದಿದೆ.

ಇದುವೇ 'ಆಪರೇಷನ್ ಗ್ರೀನ್‌ಹಂಟ್'ನ ಅಸಲೀಮುಖ.

–ಮುಗಿಯಿತು.